

# ಉಪ್ಪಿಯ ತಬ್ಬಿದ ಇಬ್ಬನಿ

‘ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾ ಮೂಲಕ ಬೆಳ್ಳಿತೆರೆಯಲ್ಲಿ ಛಾಪು ಮೂಡಿಸಿರುವ ನಟಿ ಅಂಕಿತಾ ಅಮರ್, ಇದೀಗ ಉಪೇಂದ್ರ ಅಭಿನಯದ ‘ಭಾರ್ಗವ’ ಸಿನಿಮಾದಲ್ಲಿ ನಟಿಸುವ ಅವಕಾಶ ಗಿಟ್ಟಿಸಿಕೊಂಡಿದ್ದಾರೆ. ಜೊತೆಗೆ ಖುದ್ದು ಉಪೇಂದ್ರ ಅವರೇ ಈ ಸಿನಿಮಾದಲ್ಲಿ ತಮಗೆ ಅವಕಾಶ ನೀಡಿರುವುದರ ಕುರಿತು ಸಂತಸ ಹಂಚಿಕೊಂಡಿದ್ದಾರೆ.

ನಾಗಣ್ಣ ಅವರ ನಿರ್ದೇಶನದ ‘ಭಾರ್ಗವ’ ಸಿನಿಮಾದಲ್ಲಿ ಉಪೇಂದ್ರ ನಟಿಸುತ್ತಿದ್ದು, ಈಚೆಗೆ ತಾರಾಗಣವನ್ನು ಅಂತಿಮಗೊಳಿಸಲಾಗಿದೆ. ಕಿರುತೆರೆಯಿಂದ ಬೆಳ್ಳಿತೆರೆಗೆ ಕಾಲಿಟ್ಟು, ‘ಇಬ್ಬನಿ ತಬ್ಬಿದ ಇಳೆಯಲಿ’ ಚಿತ್ರದಿಂದ ಮೆಚ್ಚುಗೆ ಪಡೆದ ನಟಿ ಅಂಕಿತಾ ಅಮರ್ ಕೂಡ ಈ ಸಿನಿಮಾಗೆ ಜೊತೆಯಾಗಿದ್ದಾರೆ.

ಈ ಅವಕಾಶದ ಕುರಿತು ಸಂತಸ ವ್ಯಕ್ತಪಡಿಸಿರುವ ಅಂಕಿತಾ, “ಇಬ್ಬನಿ ತಬ್ಬಿದ ಇಳೆಯಲಿ’ ಸಿನಿಮಾದಲ್ಲಿ ನನ್ನ ಪರ್ಫಾರ್ಮೆನ್ಸ್ ಅನ್ನು ಉಪೇಂದ್ರ ಸರ್ ಗಮನಿಸಿದ್ದರು. ನನಗೆ ಕರೆ ಮಾಡಿ ನನ್ನನ್ನು ಈ ಪಾತ್ರದಲ್ಲಿ ಮಾಡುವಂತೆ ಕೇಳಿದರು. ನಾನು ತಕ್ಷಣವೇ ಮಾಡುತ್ತೇನೆ ಎಂದೆ. ‘ಭಾರ್ಗವ’ ಸಿನಿಮಾದಲ್ಲಿ ಈ ಪಾತ್ರಕ್ಕೆ ನಾನು ತುಂಬಾ ಚೆನ್ನಾಗಿ ಹೊಂದಿಕೆಯಾಗುತ್ತೇನೆ ಎಂದೂ ಹೇಳಿದರು. ಕ್ರಿಯಾಶೀಲ ದೃಷ್ಟಿಕೋನ ಇರುವ ನಿರ್ದೇಶಕರೊಂದಿಗೆ ಮಾತನಾಡುವುದು, ಅವರೊಂದಿಗೆ ಕೆಲಸ ಮಾಡುವುದು ನನ್ನ ಪಾಲಿಗೆ ಒಲಿದ ಅದೃಷ್ಟ” ಎಂದಿದ್ದಾರೆ.

‘ಉಪೇಂದ್ರ ಸರ್ ಸಿನಿಮಾಗಳನ್ನು ನೋಡುತ್ತಾ ಬೆಳೆದವಳು ನಾನು. ಈಗ ಅವರೊಂದಿಗೆ ಕೆಲಸ ಮಾಡುವ ಅವಕಾಶ ಸಿಕ್ಕಿರುವುದು ಕನಸೊಂದು ನನಸಾದಷ್ಟು ಖುಷಿ ತಂದಿದೆ’ ಎಂದು ಸಂತಸದಿಂದ ಮಾತನಾಡಿದ್ದಾರೆ.

‘ಭಾರ್ಗವ’ ಸಿನಿಮಾದಲ್ಲಿ ತಮ್ಮ ಪಾತ್ರದ ಕುರಿತು ಹೆಚ್ಚು ಮಾಹಿತಿ ನೀಡದ ಅವರು, ತಾವು ಈ ಹಿಂದೆ ಮಾಡಿರದ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿರುವುದಾಗಿಯಷ್ಟೇ ಹೇಳಿದ್ದಾರೆ. “ಇದು ಟಿಪಿಕಲ್ ರೋಲ್ ಅಲ್ಲ. ನಾನು ಸಿನಿಮಾ ಕರಿಯರ್‌ನ ಆರಂಭಿಕ ಹಂತದಲ್ಲಷ್ಟೇ ಇರುವುದರಿಂದ ಪ್ರೇಕ್ಷಕರನ್ನು ಅರ್ಥ ಮಾಡಿಕೊಳ್ಳುವಲ್ಲಿ ಜಾಗರೂಕವಾಗಿ ಹೆಜ್ಜೆ ಇಡುತ್ತಿದ್ದೇನೆ. ‘ಇಬ್ಬನಿ ತಬ್ಬಿದ...’ ಸಿನಿಮಾ ಎಮೋಷನಲ್ ಡ್ರಾಮಾ. ‘ಜಸ್ಟ್ ಮ್ಯಾರೀಡ್’ ಮನರಂಜನಾತ್ಮಕ ಸಿನಿಮಾ. ‘ಸತ್ಯ– ಸನ್ ಆಫ್ ಹರಿಶ್ಚಂದ್ರ’ ಗಂಭೀರ ವಿಷಯದ ಸಿನಿಮಾ. ಈ ಎಲ್ಲದಕ್ಕಿಂತ ‘ಭಾರ್ಗವ’ ಸಂಪೂರ್ಣ ಭಿನ್ನವಾಗಿರಲಿದೆ. ಅನುಭವಿ ತಂಡದೊಂದಿಗೆ ಕೆಲಸ ಮಾಡುತ್ತಿರುವ ಖುಷಿ ಇದೆ. ಉತ್ತಮ ಕೌಶಲ ಕಲಿಸಿಕೊಡುವ ಭರವಸೆಯಿದೆ” ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸದ್ಯ ಅಂಕಿತಾ ಅಮರ್ ಅಭಿನಯದ ಎರಡು ಸಿನಿಮಾಗಳೂ ಬಿಡುಗಡೆಯ ಹಾದಿಯಲ್ಲಿವೆ. ■



## ‘ಪಬ್ಬಾರ್’ ಕಣಿವೆಯಲ್ಲಿ...

ರಾಮ್‌ಕುಮಾರ್ ಪುತ್ರ ಧೀರೆನ್ ಹಾಗೂ ನಿರ್ದೇಶಕ ಸಂದೀಪ್ ಸುಂಕದ್ ಹೊಸ ಸಿನಿಮಾ ‘ಪಬ್ಬಾರ್’ಗೆ ಒಂದಾಗುತ್ತಿದ್ದು, ಪ್ರೇಕ್ಷಕರನ್ನು ರಂಜಿಸಲು ಈ ಅಡ್ವೆಂಚರಸ್ ಕ್ರೈಂ ಥ್ರಿಲ್ಲರ್ ಸಿನಿಮಾ ಹೊಸ ಪ್ರಯೋಗವಾಗಲಿದೆ ಎಂದು ಚಿತ್ರತಂಡ ಹೇಳಿಕೊಂಡಿದೆ.

ಸಂದೀಪ್ ಸುಂಕದ್ ನಿರ್ದೇಶನದ ಎರಡನೇ ಸಿನಿಮಾ ಇದಾಗಿದ್ದು, ಕರ್ನಾಟಕ ಹಾಗೂ ಹಿಮಾಚಲ ಪ್ರದೇಶದ ಹಳ್ಳಿ, ಗುಡ್ಡಗಾಡು ಪ್ರದೇಶಗಳಲ್ಲಿ ಸಿನಿಮಾ ಚಿತ್ರೀಕರಿಸಲಾಗುತ್ತಿದೆ. ಹಿಮಾಚಲ ಪ್ರದೇಶದ ಕಣಿವೆ ಹೆಸರು ‘ಪಬ್ಬಾರ್’. ಇದೇ ಈ ಸಿನಿಮಾದ ಕೇಂದ್ರಬಿಂದುವೂ ಆಗಿದೆ.

ಈ ಸಿನಿಮಾ ರೂಪುಗೊಂಡ ಹಿನ್ನೆಲೆ ಬಗ್ಗೆ ಮಾತು ಹಂಚಿಕೊಂಡಿರುವ ಸಂದೀಪ್, “ಶಾಖಾಹಾರಿ’ ಸಿನಿಮಾ ಸಮಯದಲ್ಲಿ ಧೀರೆನ್ ಭೇಟಿಯಾಗಿದ್ದೆ. ಇಬ್ಬರೂ ಒಂದಾಗಿ ಸಿನಿಮಾ ರೂಪಿಸುವ ಆಲೋಚನೆ ಬಂದಿತ್ತು. ‘ಪಬ್ಬಾರ್’ ಮೂಲಕ ಅದು ಸಾಕಾರಗೊಳ್ಳುತ್ತಿದೆ. ಅನಗತ್ಯ ಕಮರ್ಷಿಯಲ್ ಫ್ರಿಲ್‌ಗಳಿಲ್ಲದೇ ಈ ಸಿನಿಮಾವನ್ನು ಪ್ರಕೃತಿ ಹಾಗೂ ವಾಸ್ತವಿಕ ಅಂಶಗಳಿಂದ ರೂಪಿಸುವ ಗುರಿ ಇದೆ” ಎಂದು ಹೇಳಿಕೊಂಡಿದ್ದಾರೆ.

ಅಷ್ಟೇ ಅಲ್ಲ, ಪ್ರೇಕ್ಷಕರನ್ನು ದೊಡ್ಡ ಮಟ್ಟದಲ್ಲಿ ಮುಟ್ಟಬೇಕೆಂದು ಭಿನ್ನ ಧಾಟಿಯಲ್ಲಿ ಈ ಸಿನಿಮಾ ನಿರೂಪಿಸುತ್ತಿದ್ದು, ಈ ಪಾತ್ರಕ್ಕೆ ಕೆಲವು ತಿಂಗಳಿನಿಂದಲೂ ಧೀರೆನ್ ಅಣಿಯಾಗುತ್ತಿರುವುದಾಗಿ ತಿಳಿದುಬಂದಿದೆ. ಈ ಸಿನಿಮಾಗಾಗಿ ಧೀರೆನ್ 12 ಕೆ.ಜಿ. ಇಳಿಸಿಕೊಂಡಿದ್ದು, ಈ ಹೊಸ ಲುಕ್ ಪ್ರೇಕ್ಷಕರನ್ನು ಖಂಡಿತ ಸೆಳೆಯಲಿದೆ ಎಂದು ಸಂದೀಪ್ ಭರವಸೆ ನೀಡಿದ್ದಾರೆ. ನಾಯಕಿಯಾಗಿ ಅಮೃತಾ ಪ್ರೇಮ್ ಜೊತೆಯಾಗಿದ್ದಾರೆ. ■